ಬಯಲಾಟ ಅಕಾಡೆಮಿ ಅಧ್ಯಕ್ಷ, ರಾಕ್‌ಗಾರ್ಡನ್ ಸ್ಥಾಪಕ | ಎಂಟು ವಿಶ್ವದಾಖಲೆ ಬರೆದಿದ್ದ ಖ್ಯಾತ ಕಲಾವಿದ

# ಶಿಲ್ಪ ಕಲೆ ತಜ್ಞ ಡಾ. ಸೊಲಬಕ್ಕನವರ ಇನ್ನಿಲ್ಲ

20/11/20

**ವಿಶ್ವವಾಣಿ ಸುದ್ದಿಮನೆ** ಶಿಗ್ಗಾಂವ

ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಹಾಗೂ ಗೊಟಗೋಡಿ ಉತ್ಸವ ರಾಕ್‌ಗಾರ್ಡನ್ ಸ್ಥಾಪಕ ಡಾ. ಟಿ.ಬಿ.ಸೊಲಬಕ್ಕನವರ (74)ಗುರುವಾರ ಬೆಳಗಿನ ಜಾವ ನಿಧನರಾದರು.

ತಾಲೂಕಿನ ಹುಲಸೋಗಿ ಗ್ರಾಮದವರಾದ ಸೊಲಬಕ್ಕನವರ ಜಾನಪದ ಕಲಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. 2005ರಲ್ಲಿ ಇವರಿಗೆ ರಾಜ್ಯ ಸರಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಇವರಿಗೆ ಫೈನ್ ಆರ್ಟ್ಸ್ ಅಕಾಡೆಮಿ ಮತ್ತು ಜಾನಪದ ವಿಜ್ಞಾನ ಅರಿವು ಪ್ರಶಸ್ತಿಗಳು ಸಂದಿವೆ. ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿದೆ. ದೊಡ್ಡಾಟ-ಸಣ್ಣಾಟ-ಬಯಲಾಟ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತಮ್ಮ ಜೀವನವನ್ನೇ ಮೂಡುಪಾಗಿಟ್ಟಿದ್ದರು.

ಬಯಲಾಟದಲ್ಲಿ ಮಾಡಿರುವ ಸೇವೆಯನ್ನು ಗುರುತಿಸಿ, ಸರಕಾರ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರನ್ನಾಗಿ ನೇಮಿಸಿದ್ದು, ಬಾಗಲಕೋಟೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. ಇವರ ಗರಡಿಯಲ್ಲಿ ಸಹಸ್ರಾರು ಸಂಖ್ಯೆಯ ಕಲಾವಿದರು ಪಳಗಿ, ಸುಂದರ ಬದುಕನ್ನು ರೂಪಿಸಿಕೊಂಡಿದ್ದಾರೆ. ಇವರು ಪತ್ನಿ ಸಾವಿತ್ರಿ, ಪುತ್ರಿ ರಾಕ್‌ಗಾರ್ಡನ್ ಕ್ಯೂರೇಟರ್ ವೇದಾರಾಣಿ ದಾಸನೂರ, ಪುತ್ರ ಕಲಾವಿದ ರಾಜ್‌ಹರ್ಷ ಸೊಲಬಕ್ಕನವರ, ಅಪಾರ ಬಂಧು ಹಾಗೂ ಅಭಿಮಾನಿಗಳನ್ನು ಅಗಲಿದ್ದಾರೆ.

**ಉತ್ಸವ ರಾಕ್ ಗಾರ್ಡನ್:** ಹುಲಸೋಗಿ ಗ್ರಾಮದಲ್ಲಿಯೇ ಕಲಾ ಸೇವೆಯಲ್ಲಿ ತೊಡಗಿದ ಸೊಲಬಕ್ಕನವರ ಅವರು, ಗಾಂಧೀಜಿ ಹಾಗೂ ಡಾ. ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿ. ಗೊಟಗೋಡಿ ಗ್ರಾಮದಲ್ಲಿ ಗಾಂಧೀಜಿ ಕಂಡ ಗ್ರಾಮೀಣ ಸಾಮ್ರಾಜ್ಯ ಕನಸಿನ ಪರಿಚಯವನ್ನು ಸಮಾಜಕ್ಕೆ ನೀಡಲು, ಗಾಂಧೀಜಿ ಅವರ ಹುಟ್ಟುಹಬ್ಬದ ದಿನವಾದ ಅಕ್ಟೋಬರ್ 2, 2010 ಶಿಲ್ಪಲೋಕಗಳ ಉತ್ಸವ ರಾಕ್ ಗಾರ್ಡನ್‌ನನ್ನು ಲೋಕಾರ್ಪಣೆ ಮಾಡಿದ್ದಾರೆ. ಗಾರ್ಡನ್ ಎಂಟು ವಿಶ್ವದಾಖಲೆಗಳಲ್ಲಿ ಹೆಸರಿಸಲ್ಪಟ್ಟಿದೆ.

## ಹಲವು ಪ್ರದರ್ಶನಾಲಯಗಳ ಸ್ಥಾಪನೆ



**ಡಾ. ಟಿ.ಬಿ.ಸೊಲಬಕ್ಕನವರ ನೇತೃತ್ವದಲ್ಲಿ ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಜಲಾಶಯ ಆವರಣದಲ್ಲಿ ಕೃಷ್ಣ, ಲವ-ಕುಶ ಗಾರ್ಡನ್ ಹಾಗೂ ನವನಗರದಲ್ಲಿ ಜಾನಪದ ಪ್ರದರ್ಶನಾಲಯ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಚಿಪಗಿಯಲ್ಲಿ ಶ್ಯಾಮಲಾ ಪಾರ್ಕ್, ದಾಂಡೇಲಿ ನೇಚರ್ ಕ್ಯಾಂಪ್, ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಶ್ರೀ ಸಿದ್ಧಗಿರಿ ಕನ್ನೇರ ಮಠದ ಉದ್ಯಾನವನ, ಪೂನಾದಲ್ಲಿ ರಾಮ ಸಂಸ್ಕೃತಿ ಪಾರ್ಕ್, ಬಳ್ಳಾರಿಯಲ್ಲಿ ಕುಂಟೆಗದ್ದೆ ಗಾರ್ಡನ್, ಗದಗದಲ್ಲಿ ಭೀಷ್ಮಾ ಸರೋವರ ಪ್ರಾಣಿ ಸಂಗ್ರಹಾಲಯ, ಮುಂಡರಗಿ ತಾಲೂಕಿನ ಸಿಂಗಟಾಲೂರ ಪಾರ್ಕ್, ಬೆಂಗಳೂರು ಜೆ.ಸಿ.ಪಾರ್ಕ್ ನಿರ್ಮಾಣಗೊಂಡಿವೆ. ಇತ್ತೀಚೆಗಷ್ಟೇ ಬೆಂಗಳೂರಿನ ಮಹಾತ್ಮಾ ಗಾಂಧಿ ಸಂಶೋಧನಾ ಸಂಸ್ಥೆ ಬಳಿ ಸೊಲಬಕ್ಕನವರ ನೇತೃತ್ವದಲ್ಲಿ ನಿರ್ಮಿಸಿದ 'ದಿ ಹೆರಿಟೇಜ್ ವಿಲೇಜ್ ಪಾರ್ಕ್' ಅನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಲೋಕಾರ್ಪಣೆಗೊಳಿಸಿದ್ದಾರೆ.**